# ಸಪ್ತಪದಿಯ ಗುಂಗಿಗೆ ಫ್ಯಾಷನ್ ರಂಗು

ಮದುವೆ ಎಂಬ ಮಹತ್ವದ ದಿನ ಉಡುಪು, ಒಡವೆ, ಮೇಕಪ್ ಎಲ್ಲದಕ್ಕೂ ಬಹಳ ಪ್ರಾಶಸ್ತ್ಯ ನೀಡುವ ವಧು, ಇತ್ತೀಚಿನ ಟ್ರೆಂಡ್‌ಗೆ ತಕ್ಕಂತೆ ಆಭರಣ, ಸೀರೆ, ಮೇಕಪ್ ಮಾಡಿಸಿಕೊಂಡು ಮಿಂಚುತ್ತಿದ್ದಾಳೆ. ಮೇಕಪ್‌ಗಾಗಿ ಜರ್ಮನಿ ತಂತ್ರಜ್ಞಾನ, ಸೀರೆಯಲ್ಲಿ ನಾವೀನ್ಯತೆ, ಒಡವೆಯಲ್ಲಿ ವಜ್ರದ, ಚಿನ್ನದ ಹೊಸ ವಿನ್ಯಾಸದ ಸೆಟ್‌ಗಳು ಸಖತ್ ಲುಕ್ ಕೊಡುತ್ತವೆ.

■ ಉಮಾ ಅನಂತ್



ಕಣ್ಣುಗಳ ತುಂಬ ಕನಸುಗಳು, ಒಡಲಲ್ಲಿ ಬಿಡಿಸಲಾಗದ ಬಾಂಧವ್ಯಕ್ಕೆ ಮುದ್ರೆ ಒತ್ತಲು ಸಜ್ಜಾಗಬೇಕಿರುವ ಆತುರ, ಕಾತರ, ಅತಿಥಿಗಳ ಮುಂದೆ ದೃಷ್ಟಿ ನಿವಾಳಿಸಿ ಒಗೆಯಬೇಕಾದಂತಹ ಚೆಲುವಿನ ಖಣಿಯಾಗಲು ಅಣಿಯಾಗುವ ತುಡಿತ, ರೇಷ್ಮೆ ಸೀರೆಯೋ ಜಗಮಗಿಸುವ ಬೆಳಕಿಗೆ ಅಷ್ಟೇ ಹೊಳಪು ನೀಡಬೇಕಾದ ಅನಿವಾರ್ಯತೆ, ಒಡವೆಗಳು ಒಡಲ ತುಂಬ ಇದ್ದು, ಅದೂ ವಿಶಿಷ್ಟ ಮೆರುಗು ನೀಡಬೇಕು, ಅಲಂಕಾರ, ಮೇಕಪ್ ಎಲ್ಲವೂ ಅಸಾಮಾನ್ಯವಾಗಿದ್ದು ಮದುವೆ ಮನೆಯಲ್ಲಿ ಮಿಂಚಬೇಕು ಎಂಬ ಹಂಬಲ... ಇವೆಲ್ಲವೂ ವಿವಾಹ ಮಹೋತ್ಸವದಲ್ಲಿ, ಕನಸು ಸಾಕಾರಗೊಳ್ಳುವ ಸಮಯದಲ್ಲಿ ಮದುವಣಗಿತ್ತಿಯ ಮನದಾಳದ ಭಾವನೆಗಳ ಒಳತುಮುಲಗಳ ಚಿತ್ರಣ.

ಹೌದು ಮದುವೆ ಎಂಬ ಜೀವನದ ಮಹತ್ತರ ಘಟ್ಟದ ದಿನ ವಧುವಿಗೆ ತಾನು ಹೇಗೆ ಕಾಣಬೇಕು, ಫ್ಯಾಷನ್ ಜಗತ್ತಿನ ಲೇಟೆಸ್ಟ್ ಟ್ರೆಂಡ್‌ಗೆ ಹೇಗೆ ಆತುಕೊಳ್ಳಬೇಕು, ಉಡುಪು, ಒಡವೆಗಳು ಹೇಗಿರಬೇಕು ಎಂಬ ಬಗ್ಗೆ ಮದುವೆ ನಿಕ್ಕಿಯಾದ ದಿನದಿಂದಲೇ ಲೆಕ್ಕಾಚಾರ ಶುರುವಾಗುತ್ತದೆ. ಹೇಳಿಕೇಳಿ ಇದು ಫ್ಯಾಷನ್ ಟ್ರೆಂಡ್‌ಗೆ ಮನಸೋಲಬೇಕಾದ ಸಮಯ.

## ಬ್ರೈಡಲ್ ಮೇಕಪ್

ಸಾಧಾರಣ ಮೇಕಪ್ ಮಾಡಿ ಇಂದು ವಧು ಹಸೆಮಣೆ ಏರುವುದೇ ಇಲ್ಲ. ಇಂದಿನ ಟ್ರೆಂಡ್‌ಗೆ ತಕ್ಕ ಹಾಗೆ ಭರ್ಜರಿಯಾಗಿಯೇ ಮೇಕಪ್ ಮಾಡಿಸಿಕೊಳ್ಳುವುದು ಮದುವಣಗಿತ್ತಿಗೆ ಇಷ್ಟದ ಸಂಗತಿ. ಇದೀಗ ಫ್ಯಾಷನ್‌ಪ್ರಪಂಚದಲ್ಲಿ ಸಾಕಷ್ಟು ಅತ್ಯಾಧುನಿಕ ರೀತಿಯ ಮೇಕಪ್‌ಗಳು ಲಭ್ಯ.